# ಸಿಮೋನಾ 'ದಿ ಚಾಂಪಿಯನ್'

ಸಿಮೋನಾ ಹೆಲೆಪ್ ಈಗ ವಿಶ್ವದ ನಂಬರ್ ಒನ್ ಟೆನಿಸ್ ಆಟಗಾರ್ತಿ. ವಿಶ್ವ ಟೆನಿಸ್ ಅಸೋಸಿಯೇಷನ್ ನೀಡುವ ರ್‍ಯಾಂಕಿಂಗ್‌ನಲ್ಲಿ ಕಳೆದ 9 ತಿಂಗಳಿಂದ 'ನಂಬರ್ ಒನ್' ಸ್ಥಾನದಲ್ಲಿರುವ ಈ ಆಟಗಾರ್ತಿ. ಅರ್ಹವಾಗಿಯೇ ಕಳೆದ ವಾರ 2018ರ ಫ್ರೆಂಚ್ ಓಪನ್ ಕಿರೀಟವನ್ನು ತನ್ನ ಮುಡಿಗೇರಿಸಿಕೊಂಡಿದ್ದಾಳೆ. ಫೈನಲ್‌ನಲ್ಲಿ ಸ್ಲೊವೇನ್ ಸ್ಟೀಫನ್ಸ್ ವಿರುದ್ಧ ಮೊದಲ ಸೆಟ್‌ನಲ್ಲಿ ಸೋತರೂ ನಂತರದ ಎರಡು ಸೆಟ್‌ಗಳಲ್ಲಿ ಜಯಗಳಿಸಿ ಫ್ರೆಂಚ್ ಓಪನ್ ಕಪ್‌ಗೆ ಮುತ್ತಿಟ್ಟಿದ್ದಾರೆ. 26ರ ಹರೆಯದಲ್ಲಿಯೇ ಸಿಮೋನಾ ಮಾಡಿರುವ ಈ ಸಾಧನೆ ಎರಡು ರೀತಿಯಲ್ಲಿ ಸಂಭ್ರಮಕ್ಕೆ ಅರ್ಹ. ಸಾಮಾನ್ಯವಾಗಿ ಅಮೆರಿಕ, ಫ್ರಾನ್ಸ್, ಸ್ವಿಝರ್ಲೆಂಡ್, ಜೆಕ್ ಆಟಗಾರರೇ ಪಾರಮ್ಯ ಸಾಧಿಸುವ ವಿಶ್ವ ಟೆನಿಸ್‌ನಲ್ಲಿ ಇದೇ ಮೊದಲ ಬಾರಿಗೆ ರೊಮೇನಿಯಾದ ಈ ಆಟಗಾರ್ತಿ ತನ್ನ ಮೊಟ್ಟಮೊದಲ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆದ್ದು ದೇಶವಾಸಿಗಳಲ್ಲಿ ಸಂಭ್ರಮ ಮೂಡಿಸಿದ್ದಾಳೆ. ರುಮೇನಿಯಾದ ಆಟಗಾರನೊಬ್ಬ ಈ ಹಿಂದೆ ಗ್ರ್ಯಾನ್‌ಸ್ಲಾಮ್ ಗೆದ್ದಿದ್ದು 1972ರಲ್ಲಿ! ಇಲಿ ನಸ್ತಾಸೆ 72ರಲ್ಲಿ ಅಮೆರಿಕ ಓಪನ್ ಪ್ರಶಸ್ತಿ ಗೆದ್ದದ್ದು ಆ ದೇಶದಲ್ಲಿ ಸಂಭ್ರಮ ಮೂಡಿಸಿತ್ತು. ಅದರ ಮರುವರ್ಷ ಇಲಿ ನಸ್ತಾಸೆ ಫ್ರೆಂಚ್ ಓಪನ್ ಪ್ರಶಸ್ತಿಯನ್ನೂ ಗೆದ್ದು ಎರಡು ಗ್ರ್ಯಾನ್‌ಸ್ಲಾಮ್ ಸಾಧನೆ ಮಾಡಿದ್ದರು. ಅದಾಗಿ ಈಗ 45 ವರ್ಷಗಳೇ ಸಂದಿವೆ. ಈಗ ಮತ್ತೆ ಆ ದೇಶಕ್ಕೆ ಸಂಭ್ರಮ ತಂದುಕೊಟ್ಟಿರುವಾಕೆ ಸಿಮೋನಾ ಹೆಲೆಪ್.

ಇದು ಸಿಮೋನಾಳ ವೈಯಕ್ತಿಕ ಸಂಭ್ರಮವೂ ಹೌದು. ಏಕೆಂದರೆ ಕಳೆದ ಐದು ವರ್ಷಗಳಲ್ಲಿ ಈಕೆ ಮೂರು ಸಲ ಗ್ರ್ಯಾನ್‌ಪ್ರಿ ಫೈನಲ್‌ಗೆ ಬಂದರೂ ಪ್ರಶಸ್ತಿ ಗೆಲ್ಲಲಾಗಲಿಲ್ಲ! 2014ರಲ್ಲಿ ಫ್ರೆಂಚ್ ಓಪನ್‌ನ ಫೈನಲ್‌ಗೆ ಬಂದಾಗ, ಮರಿಯಾ ಶರಪೋವ ವಿರುದ್ಧ ಸೋಲುಂಡು 'ರನ್ನರ್ ಅಪ್' ಆದಳು. 2017ರಲ್ಲಿ ಮತ್ತೆ ಫ್ರೆಂಚ್ ಓಪನ್ ಫೈನಲ್‌ಗೆ ಬಂದರೂ, ಜೆಲೆನಾ ವಿರುದ್ಧ ಸೋತಳು. ಆಸ್ಟ್ರೇಲಿಯನ್ ಓಪನ್ ಫೈನಲ್‌ನಲ್ಲಿ ವೊಜ್ನಿಯಾಕಿ ಈಕೆಯನ್ನು ಸೋಲಿಸಿ ಪ್ರಶಸ್ತಿ ಗೆದ್ದಳು. ಹೀಗೆ ಮೂರು ಬಾರಿಯೂ ಅದೃಷ್ಟ ಕೈಕೊಟ್ಟಿತ್ತು. ಈ ಸಲ ಫ್ರೆಂಚ್ ಓಪನ್‌ನ ಫೈನಲ್‌ನಲ್ಲಿ ಮೊದಲ ಸೆಟ್ ಸೋತಾಗ, 'ಮತ್ತೆ ಹಳೆಯ ಕಥೆಯೇ ಪುನರಾವರ್ತನೆ ಆಗಬಹುದು' ಎಂದು ಈಕೆಗೆ ಭಯವಾಗಿತ್ತಂತೆ. ಆದರೆ 'ಆದದ್ದಾಗಲಿ, ನನ್ನ ಒರಿಜಿನಲ್ ಆಟಕ್ಕೇ ಅಂಟಿಕೊಳ್ಳೋಣ, ಸಹಜವಾಗಿಯೇ ಆಡೋಣ' ಎಂದುಕೊಂಡವಳು ಎದುರಾಳಿಯನ್ನು ಬಗ್ಗುಬಡಿದಿದ್ದಾಳೆ.

ಸಿಮೋನಾ ಈ ಅವಧಿಯಲ್ಲಿ ಬೇರೆ ಪ್ರಶಸ್ತಿಗಳನ್ನು ಸಾಕಷ್ಟು ಗೆದ್ದುಕೊಂಡಿದ್ದಾಳೆ. 2013ರಲ್ಲಂತೂ ಸತತ ಆರು ಡಬ್ಲ್ಯುಟಿಎ ಟೈಟಲ್‌ಗಳನ್ನು ಗೆದ್ದು ಸ್ಟೆಫಿ ಗ್ರಾಫ್‌ಳ ದಾಖಲೆಯ ಸಮೀಪಕ್ಕೆ ಬಂದಿದ್ದಳು.

ಈಕೆಯ ಪ್ರಗತಿಯ ಪಟ್ಟಿಯನ್ನು ಗಮನಿಸಿ: 2012ರಲ್ಲಿ ಈಕೆ ವಿಶ್ವದ 'ಟಾಪ್ 50' ಆಟಗಾರ್ತಿಯರ ಪಟ್ಟಿಗೆ ಸೇರಿದಳು. ಸತತ ಸಾಧನೆಯೊಂದಿಗೆ ಪ್ರಶಸ್ತಿಗಳನ್ನು ಗೆಲ್ಲುತ್ತಾ ಮುನ್ನಡೆದು 2013ರ ಆಗಸ್ಟ್ ವೇಳೆಗೆ 'ಟಾಪ್ 20' ಪಟ್ಟಿಯಲ್ಲಿ ಸ್ಥಾನ ಪಡೆದಳು. 2014ರ ಜನವರಿಯಲ್ಲಿ 'ಟಾಪ್ 10' ಪಟ್ಟಿಯಲ್ಲಿ ಹೆಸರು ಕಾಣಿಸಿಕೊಂಡಿತು. ಅದಾಗಿ ಮೂರು ವರ್ಷಗಳ ಬಳಿಕ ಈಕೆ ವಿಶ್ವದ ಟಾಪ್ ರ್‍ಯಾಂಕಿಂಗ್ ಆಟಗಾರ್ತಿಯಾದಳು.

ಈ ಗ್ರ್ಯಾನ್‌ಪ್ರಿ ವಿಜಯದೊಂದಿಗೆ ಬಹುಶಃ ವಿಶ್ವ ಮಹಿಳಾ ಟೆನಿಸ್‌ನಲ್ಲಿ ಯುವಜನರ ಹೊಸ ಯುಗ ಆರಂಭವಾದಂತಾಗಿದೆ. ಇನ್ನು ಸೆರೆನಾ ವಿಲಿಯಮ್ಸ್, ಮರಿಯಾ ಶೆರಪೋವಾ, ವೊಜ್ನಿಯಾಕಿ ಮುಂತಾದ ಹಳಬರೆಲ್ಲ ತೆರೆಮರೆಗೆ ಸರಿಯುವ ಸಮಯ ಎನ್ನಬಹುದು.

ಸಿಮೋನಾಳ ಟೆನಿಸ್ ಆಟ ಶುರುವಾದದ್ದು ನಾಲ್ಕು ವರ್ಷವಿದ್ದಾಗ! ಆರನೇ ವರ್ಷದಿಂದ ಪ್ರತಿದಿನ ಕೋರ್ಟ್‌ನಲ್ಲಿ ಅಭ್ಯಾಸ ಶುರು! ತಂದೆ ಕಿರಿಯ ಲೀಗ್‌ನಲ್ಲಿ ಫುಟ್‌ಬಾಲ್ ಆಡುತ್ತಿದ್ದ. ಟೆನಿಸ್ ಭವಿಷ್ಯಕ್ಕೆ ಚಿಕ್ಕಂದಿನಿಂದಲೇ ನೀರೆರೆದು ಪೋಷಿಸಿದ. 2008ರಿಂದ ಜೂನಿಯರ್ ವಿಭಾಗದಲ್ಲಿ ಆಡತೊಡಗಿದ ಸಿಮೋನಾ, ಆ ಹಂತದಲ್ಲೇ ಹಲವು ಪ್ರಶಸ್ತಿಗಳನ್ನು ಗೆಲ್ಲತೊಡಗಿದಳು. ರೋಲ್ಯಾಂಡ್ ಗೆರೆಸ್‌ನಲ್ಲಿ 2008ರಲ್ಲಿ ಜೂನಿಯರ್ ಟೈಟಲ್ ಗೆದ್ದಾಗ ಟೆನಿಸ್ ಜಗತ್ತು ಈಕೆಯ ಕಡೆಗೆ ಅಚ್ಚರಿಯಿಂದ ನೋಡಿತ್ತು. ಇದೀಗ ಮುಂದಿನ ತಿಂಗಳು ನಡೆಯಲಿರುವ ವಿಂಬಲ್ಡನ್ ಪ್ರಶಸ್ತಿಯ ಮೇಲೆ ಕಣ್ಣಿಟ್ಟಿದ್ದಾಳೆ.

2009ರಲ್ಲೊಮ್ಮೆ ಸಿಮೋನಾ ಮಾಧ್ಯಮದ ಮೆಳ್ಳೆಗಣ್ಣಿಗರ ಲೇವಡಿಗೆ ಗುರಿಯಾದದ್ದುಂಟು. ಈಕೆಯ ದೊಡ್ಡ ಗಾತ್ರದ ಸ್ತನಗಳ ಬಗ್ಗೆ ಸಲ್ಲದ ಕಾಮೆಂಟುಗಳು ಬಂದವು. ಆಟದ ವೇಳೆ ಬೆನ್ನುನೋವು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಈಕೆ ಸ್ತನದ ಆಪರೇಷನ್ ಮಾಡಿಸಿಕೊಂಡು ಚಿಕ್ಕದಾಗಿಸಿದಳು. ಅದಕ್ಕೂ ಟೀಕೆ ಟಿಪ್ಪಣಿಗಳು ಬಂದವು. ಆದರೆ ಅವನ್ನೆಲ್ಲ ಲೆಕ್ಕಿಸದ ಸಿಮೋನಾ ತನ್ನ ಗುರಿಯತ್ತ ಏಕಾಗ್ರಚಿತ್ತದಿಂದ ಮುನ್ನಡೆದಿದ್ದಾಳೆ. ಮೊನ್ನೆ ಫ್ರೆಂಚ್ ಓಪನ್ ಪ್ರಶಸ್ತಿಯೊಂದಿಗೆ 1.63 ದಶಲಕ್ಷ ಪೌಂಡ್ ಬಹುಮಾನವನ್ನು ಗೆದ್ದಿದ್ದಾಳೆ. ಈವರೆಗೆ ಈಕೆ ಟೆನಿಸ್ ಕೋರ್ಟ್‌ನಲ್ಲಿ ಗೆದ್ದಿರುವ ಬಹುಮಾನದ ಒಟ್ಟು ಮೊತ್ತ 17.9 ದಶಲಕ್ಷ ಪೌಂಡ್ ದಾಟಿದೆ! 26ರ ಹರೆಯದಲ್ಲೇ (ಬರ್ತ್‌ಡೇ 27.9.1991) 108 ದಶಲಕ್ಷ ಪೌಂಡ್ ಆಸ್ತಿಯ ವಾರಸುದಾರಳೀಕೆ! ಆಕ್ರಮಣಕಾರಿ ಬೇಸ್‌ಲೈನ್ ಆಟಕ್ಕೆ ಹೆಸರುವಾಸಿ ಆಗಿರುವ ಸಿಮೋನಾ ನೈಕ್, ಅಡಿದಾಸ್, ಲಕೋಸ್ಟೆ, ಹ್ಯೂಬ್ಲೊಟ್, ಮರ್ಸಿಡಿಸ್ ಬೆಂಜ್ ಮುಂತಾದ ಕಂಪೆನಿಗಳ ರಾಯಭಾರಿಯೂ ಹೌದು. ಸರ್ವಿಸ್‌ನಲ್ಲಿ ಸದ್ದು ಮಾಡದೇ ಇರುವುದು ಮತ್ತು ಇಡೀ ಕೋರ್ಟ್ ತುಂಬ ಓಡಾಡಿ ರಿವರ್ಸ್ ಮಾಡುವುದು ಈಕೆಯ ವೈಶಿಷ್ಟ್ಯ. ■




Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65